ಈ ಸದನದಲ್ಲಿ ಲಿಖಿತಮೂಲಕವಾಗಿ ಆಪಾದನೆಗಳನ್ನು ಕೊಟ್ಟಾಗ ಇಲ್ಲಿ ಆಪಾದನೆಗಳ ಸುರಿಮಳೆ ಹೇಗಾಯಿತು ಎಂಬುದಕೂಡ ನನಗೆ ಗೊತ್ತಿದೆ. ಆದರೆ ಮಾನ್ಯ ಸಂಜೀಗೌಡರು ಆ ಪ್ರಶ್ನೆಯನ್ನು ಎತ್ತದಿದ್ದರೆ ಬಹಳ ಅನುಕೂಲ. ಈ ದಿವಸ ಮುಖ್ಯಮಂತ್ರಿಗಳಿಗೆ ನಾವು ಹೇಳತಕ್ಕ ಆಪಾದನೆಗಳನ್ನು ಅವರು ನಿರಾಕರಣೆ ಮಾಡುವಾಗ ಮತ್ತು ಅದಕ್ಕೆ ಇಲ್ಲಿ ಅವಕಾಶವಿದೆ ಎಂದಾಗ ನಾವು ಅವರು ಹೇಳುವುದರ ಬಗ್ಗೆ ಟೀಕೆ ಮಾಡುವುದಕ್ಕೆ ಅವಕಾಶವಿದೆಯೋ ಇಲ್ಲವೇ ಎಂಬುದರ ಬಗ್ಗೆ ನಮಗೆ ಒಂದು ಮಾರ್ಗದರ್ಶನ ಬೇಕಾಗಿದೆ. ಅದನ್ನು ಅಧ್ಯಕ್ಷರು ಮಾಡಿಕೊಡಬೇಕು.

ಅಧ್ಯಕ್ಷರು.— ಅವರು ಯಾರೂ ಹಾಗೆ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್.– ಈ ಸಮಿತಿಯ ಧೋರಣೆ ಬಗ್ಗೆ ಮತ್ತು ಇದರ ಸ್ಥಾಪನೆಯ ಬಗ್ಗೆ ಏನೋ ಒಂದು ರೀತಿಯಲ್ಲಿ ಶ್ರೀಮಾನ್ ಚನ್ನಬಸಪ್ಪನವರು ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.— ನಾನಾಗಲೇ ಆ ವಿಚಾರವನ್ನು ಡ್ರಾಪ್ ಮಾಡಿ ಎಂದು ಹೇಳಿದ್ದೇನಲ್ಲಾ?

ಶ್ರೀ ವಾಟಾಳ್ ನಾಗರಾಜ್.— ಆ ಸಮಿತಿಯಲ್ಲಿ ಕೋಟ್ಯಾಧೀಶರರಿದ್ದಾರೆ... (ಗಲಾಟೆ)

ಅಧ್ಯಕ್ಷರು.– ಅದರಲ್ಲಿ ಕೋಟ್ಯಾಧೀಶ್ವರರಂ ಇದ್ದರೆ ತಪ್ಪೇನಿದೆ ?

ಶ್ರೀ ವಾಟಾಳ್ ನಾಗರಾಜ್- ಇವರು ತಮ್ಮ ಪಕ್ಷವನ್ನು ಬೆಳೆಸುವುದಕ್ಕೆ ಇವನ್ನೆಲ್ಲಾ ಮಾಡುತ್ತಿದ್ದಾರೆ.

(ಹಾಗೆ ಹೇಳುತ್ತಿದ್ದಂತೆಯೇ ಮಾನ್ಯ ಸದಸ್ಯರು ಎದ್ದು ತಮ್ಮ ಸ್ಥಳವನ್ನು ಬಿಟ್ಟು ಎರಡು ಪಕ್ಷಗಳ ಮಧ್ಯೆ ಇರತಕ್ಕ ದಾರಿಯಲ್ಲಿ ಕುಳಿತರು)

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಸ್ವಲ್ಪ ಶಾಂತರಾಗಿ ಕುಳಿತುಕೊಳ್ಳಿ. ನಿಮ್ಮ ಆಪಾದನೆಗಳಿವೆ ಅವುಗಳೆಲ್ಲದರ ಬಗ್ಗೆ ಒಂದು ಸಬ್‌ಸ್ಟಾಂಟೀವ್ ಮೋಷನ್ನನ್ನು ಕಳುಹಿಸುತ್ತೇವೆಂದು ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಅದು ಬರಲಿ. ಆನಂತರ ಮುಂದಿನ ವಿಷಯಗಳನ್ನು ನೋಡೋಣ:

ಶ್ರೀ ಎಂ. ಎಸ್. ಕೃಷ್ಣನ್.– ಈಗ ಇರುವುದು ಅನ್ ಆಫಿಷಿಯಲ್ ಕಮಿಟಿ ಅದನ್ನೇ ಒಂದು ಆಫಿಷಿಯಲ್ ಕಮಿಟಿಯಾಗಿ ಪರಿವರ್ತನೆ ಮಾಡಿ ಎಂದು ಸಲಹೆ ಮಾಡುತ್ತಿದ್ದೇನೆ.

ಅಧ್ಯಕ್ಷರು.— ಈಗ ನಿರ್ಣಯಗಳ ಮೇಲಿನ ದರ್ಜೆ ಮುಂದುವರಿಯಬಹುದು. ಶ್ರೀ ಸಿ. ಎನ್. ಪಾಟೀಲರು ತಮ್ಮ ನಿರ್ಣಯವನ್ನು ಮಂಡಿಸಬಹುದು.

Officiale Resolutioni. *Re- Laying of a new broadgauge Railway love between Bellary and Gulbarga*

ಶ್ರೀ ಸಿ. ಎನ್. ಪಾಟೀಲ್ (ಲಿಂಗಸುಗೂರು)

ಮಾನ್ಯ ಅಧ್ಯಕ್ಷರೇ.- ನಾನು ಈಗಲೇ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯದಲ್ಲಿ ಬಳ್ಳಾರಿಯಿಂದ—ಗುಲ್ಬರ್ಗಕ್ಕೆ ರಾಯಚೂರು, ಬೀದಾರ್, ಸಿರಗುಪ್ಪ, ಲಿಂಗಸೂಗೂರು, ಸಿಂಧನೂರ್ ಮತ್ತ ಷಹಪೂರ್ ಹಾಗೂ ಸುರಪುರಗಳ ಮಾರ್ಗವಾಗಿ ಅಲ್ಲಿರತಕ್ಕ ಬ್ರಾಡ್‌ಗೇಜ್ ಲೈನಿಗೆ ಕನೆಕ್ಷನ್ ಕೊಡತಕ್ಕ ಒಂದು ಬ್ರಾಡ್‌ಗೇಜ್ ರೈಲ್ವೆ ಲೈನನ್ನು ಹಾಕುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಬೇಕೆಂದು ಕೇಳಿಕೊಂಡಿದ್ದೇನು. ಕೇಂದ್ರ ಸರ್ಕಾರದವರು ಕೂಡಲೇ ಇದರ ಸರ್ವೆಕಾರ್ಯ ನಡೆಸಿ ಇಲ್ಲಿ ಒಂದು ಬ್ರಾಡ್ ಗೇಜ್ ರೈಲ್ವೆ ಲೈನನ್ನು ಹಾಕತಕ್ಕ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲಿ ಬ್ರಾಡ್‌ಗೇಜನ್ನು ಹಾಕಬೇಕೆಂಬುದಕ್ಕೆ ಮುಖ್ಯ ಕಾರಣಗಳೇನು ಎಂದರೆ - ಒಂದನೇಯದಾಗಿ ಬಳ್ಳಾರಿ ಜಿಲ್ಲೆಯಲ್ಲಿ ಹೊರೆಯತಕ್ಕ ಕಬ್ಬಿಣದ ಅದಿರನ್ನು ಸಾಗಿಸುವುದಕ್ಕೂ ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆಗೆ ಮತ್ತು ತುಂಗಭದ್ರಾ ಆಚ್ಚುಕಟ್ಟಿನ ಪ್ರದೇಶಕ್ಕೆ ಹಾಗೂ ಕೃಷ್ಣಾ ಪ್ರಾಜೆಕ್ಟಿಗೆ ಮುಂದೆ ಒಂದು ಅನುಕೂಲವಾಗಲೆಂಬ ದೃಷ್ಟಿಯಿಂದ ನಾನು ಇದನ್ನು ಸಲಹೆ ಮಾಡುತ್ತಿದ್ದೇನೆ, ಈ ಬ್ರಾಡ್‌ಗೇಜ್ ಲೈನನ್ನು

(ಶ್ರೀ ಸಿ. ಎನ್. ಪಾಟೀಲ್)

ಬಳ್ಳಾರಿಯಿಂದ ಇಲ್ಲವೇ ಹೊಸಪೇಟೆ ಇಂದ ಸಿರಗುಪ್ಪಾ—ಸಿಂಧನೂರು—ಲಿಂಗಸೂಗುರು—ಷಹಪುರ —ಸುರಪುರಗಳ ಮಾರ್ಗವಾಗಿ ಬ್ರಾಡ್‌ಗೇಜ್ ರೈಲ್ವೆ ಲೈನನ್ನು ಎಳೆಯುವುದಕ್ಕೆ ಸರ್ವೆಮಾಡಿಸಬೇಕೆಂದು ಹೇಳುತ್ತಿದ್ದೇನೆ. ಈ ರೈಲ್ವೆ ಲೈನನ್ನು ಗುಲ್ಬರ್ಗಾಕ್ಕೆ ಕೊಡಿಸಬೇಕಾಗಿದೆ.

ಅದನ್ನು ಮುಂದೆ ಅನುಕೂಲ ಕಂಡರೆ ಬೀದರ್‌ವರೆಗೂ ಕೂಡಿಸಬಹುದು. ಅದರಿಂದ ಆಪ್ಪರ್ ಕೃಷ್ಣ ಪ್ರಾಜೆಕ್ಟಿನ ಕೆಳಗೆ ಬರುವ ಸುಮಾರು ೨೦ ಲಕ್ಷ ಎಕರೆಗಿಂಪ್ಟು ನೀರಾವರಿ ಯೋಜನೆಗೆ ಈ ರೈಲ್ವೆ ಲೈನ್ ಹಾಕುವುದರಿಂದ ಅನುಕೂಲವಾಗುತ್ತದೆ ಅದೂ ಅಲ್ಲದೆ ಈ ರೈಲ್ವೆ ಲೈನ್ ಹಾಕುವುದರಿಂದ ನಮಗೆ ಮುಂದೆ ಬೇಕಾಗುವ ಕೆಮಿಕಲ್ ಫರ್ಟಿಲೈಜರ್ಸ್, ಆಹಾರ ಧಾನ್ಯಗಳು, ಮತ್ತು ಅಗ್ರಿಕಲ್‌ಚರಲ್ ಪ್ರಾಡಕ್ಟ್ಸ್ ಅಂದರೆ ಹತ್ತಿ ಮತ್ತು ಎಣ್ಣೆಯ ಬೀಜಗಳು ಮುಂತಾದ ಬೆಳೆಗಳನ್ನು ನಮ್ಮ ಕ್ಷೇತ್ರಗಳಿಂದ ಪರದೇಶಗಳಿಗೆ ನಮ್ಮ ಮಂಗಳೂರು ಬಂದರು ಮೂಲಕ ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತಗಳಿಗೆ ಸಾಗಿಸಬಹುದು. ಹಾಗೆಯೇ ಹೊರಗಿನಿಂದ ಬರತಕ್ಕಂಥ ಫರ್ಟಿಲೈಜರುಗಳನ್ನು ಮತ್ತು ಇತರ ಪದಾರ್ಥಗಳನ್ನು ವಿಜಯನಗರದ ಉಕ್ಕಿನ ಕಾರ್ಖಾನೆಗೆ ಸಾಗಿಸುವುದಕ್ಕೂ ಅನುಕೂಲವಿದೆ. ನಮ್ಮಲ್ಲಿ ಬೆಳೆದ ಬೆಳೆಗಳನ್ನು ರಾಜ್ಯದ ಎಲ್ಲಾ ಮೂಲೆಗಳಿಗೂ ಸಾಗಿಸುವುದಕ್ಕೋಸ್ಕರ ಮತ್ತು ಇತರ ಎಲ್ಲಾ ಅನುಕೂಲತೆಯ ದೃಷ್ಟಿಯಿಂದ ಈ ರೈಲ್ವೆ ಲೈನನ್ನು ಕೇಂದ್ರ ಸರ್ಕಾರದವರು ಕೈಗೆತ್ತುಕೊಂಡು ಅದನ್ನು ಜಾಗ್ರತೆಯಾಗಿ ಸರ್ವೆಮಾಡಿ ನಮ್ಮ ರಾಜ್ಯಕ್ಕೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರ ಬಗ್ಗೆ ಈಗಾಗಲೇ ಅಸೆಂಬ್ಲಿ ಮುಂದೆ ಒಂದು ನಿರ್ಣಯವನ್ನೂ ಸಹ ಮೂವ್‌ಮಾಡಿದ್ದೇನೆ. ಇಂಥಾದ್ದಕ್ಕೆ ಮಾನ್ಯ ಸದಸ್ಯರೆಲ್ಲರೂ ಪೂರ್ಣವಾಗಿ ಬೆಂಬಲ ಕೊಡಬೇಕೆಂದು ನಾನು ಕೇಳಿಕೊಂಡು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ವಿಜಯ ದೇಸಾಯಿ (ಚಿತಾಪುರ):— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ತಂದಿರುವುದಕ್ಕಾಗಿ ನಾನು ಅದಕ್ಕೆ ಸಂಪೂರ್ಣವಾಗಿ ಅನುಮೋದನೆಯನ್ನೀಯುತ್ತಾ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಹೈದರಾಬಾದ್ ಕರ್ನಾಟಕ ಏರಿಯಾ ಮೊದಲಿನಿಂದಲೂ ಹಿಂದಿನ ಸರ್ಕಾರದ ದಬ್ಬಾಳಿಕೆಗೆ ಒಳಗಾಗಿರತಕ್ಕ ಪ್ರದೇಶವಾಗಿತ್ತೆಂದು ನಾನು ಹೇಳಬಯಸುತ್ತೇನೆ. ಅಷ್ಟೇ ಅಲ್ಲದೆ ಆಗಿನ ಸುಭೇದಾರರಾಗಲೀ ಜಾಗೀರುದಾರರಾಗಲೀ ಅವರು ಆಗಿನ ಸರ್ಕಾರಕ್ಕೆ ಅನೇಕ ಜಮೀನುಗಳನ್ನು ಜಹಗೀರಾಗಿ ಸಲ್ಲಿಸುತ್ತಿದ್ದರು. ಅನಂತರ ಉಳಿದುದನ್ನು ರೈತರಿಗೆ ಹಂಚುತ್ತಿದ್ದರು. ತಮಗೆ ಬಂದಂಥ ಕಾಣಿಕೆಗಳ ಅರ್ಧಾಂಶವನ್ನು ಕೆಲವರು ತಾವೇ ಉಪಯೋಗ ಮಾಡುತ್ತಿದ್ದರು. ಆದರೆ ಆಗ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ತರಹ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಆಗಿನ ಸರ್ಕಾರದವರು ಅಲ್ಲಿ ಕೈಗೊಂಡಿರಲಿಲ್ಲ. ಅದರಿಂದಾಗಿ ಅನೇಕರು ಆ ಕಾಲದಲ್ಲಿಯೇ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿಯೂ ವಿದ್ಯುಚ್ಛಕ್ತಿ ಸೌಕರ್ಯವಾಗಲೀ ಅಥವಾ ಇನ್ನೂ ಇತರ ಯಾವ ಸೌಕರ್ಯಗಳನ್ನು ನೋಡುತ್ತಿರಲಿಲ್ಲ. ಅಂತಹ ಪ್ರದೇಶದಲ್ಲಿ ಈಗ ರೈಲ್ವೆ ಮಾರ್ಗ ಬಹಳ ಅತ್ಯಗತ್ಯವೆಂದು ನಾನು ಹೇಳಬಯಸುತ್ತೇನೆ. ೧೯೪೮ರಲ್ಲಿ ಯಾವಾಗ ಹೈದರಾಬಾದ್ ಸರ್ಕಾರ ಕೇಂದ್ರದಲ್ಲಿ ವಿಲೀನವಾಯಿತೋ ಆ ಕಾಲದಿಂದ ಕೇವಲ ಕೆಲವು ಸೌಕರ್ಯಸೌಲಭ್ಯಗಳನ್ನು ಒದಗಿಸಲಾಯಿತು. ಅಷ್ಟೇ ಅಲ್ಲದೆ ೧೯೫೨—೫೩ರಲ್ಲಿ ಮಾತ್ರ ಆಗಿನ ಸರ್ಕಾರ ತುಂಗ ಭದ್ರಾ ಪ್ರಾಜೆಕ್ಟನ್ನು ಕೈ ಗೊಂಡಿದ್ದರಿಂದ, ಆ ಪ್ರಾಜೆಕ್ಟಿನ ಕೆಳಗೆ ಎಷ್ಟೋ ನೀರಾವರಿ ಸೌಕರ್ಯಗಳಂ ಅಷ್ಟನ ಜನರಿಗೆ ಆಗ ಸಿಕ್ಕಿತು. ಅದರಿಂದಾಗಿ ಕಬ್ಬು ಆಗಲೀ, ನೆಲ್ಲಾಗಲೀ, ಇನ್ನೂ ಇತರ ಹತ್ತಿಬೆಳೆಯಂನ್ನಾಗಲೀ ಬೆಳೆಯುವುದಕ್ಕೆ ಪ್ರಾರಂಭ ಆಯಿತು ಇದರಿಂದಾಗಿ ವ್ಯವಸಾಯದಲ್ಲಿ ಒಂದು ರೀತಿಯ ಉತ್ತೇಜನ ಅಲ್ಲಿಯ ಜನರಿಗೆ ದೊರೆಯಿತು. ಅಲ್ಲಿಗೆ ಒಂದು ಸೂಕ್ತ ರೈಲ್ವೆ ಮಾರ್ಗ ಇರಬೇಕೆಂದು ನಾವು ಆಗಿನ ಸರ್ಕಾರಕ್ಕೆ ಮನವಿಮಾಡಿಕೊಂಡರೆ ಮತ್ತು ಅದರಿಂದಾಗಿ ಕೆಲವು ಕೈಗಾರಿಕೆಗಳನ್ನು ಅಲ್ಲಿ ನೀವು ಸ್ಥಾಪಿಸಬೇಕೆಂದು ನಾವು ಅಲ್ಲಿನ ಸರ್ಕಾರಕ್ಕೆ ಒತ್ತಾಯದಿಂದ ಹೇಳಿದ್ದರೂ ಸಹ ಅಲ್ಲಿಗೆ ರೈಲ್ವೆ ಮಾರ್ಗವನ್ನು ಮಾಡಿಸಿಕೊಡಲಿಲ್ಲ. ನಮಗೆಪ್ರೈಯಾರಿಟಿ ಪ್ರಿಫರೆನ್ಸ್ ಇಲ್ಲವೆಂದು ಹೇಳಿದ್ದೂ ಉಂಟು ಅದೇ ರೀತಿಯಾಗಿ ನಮ್ಮ ಸರ್ಕಾರದವರು ಹೇಳಿದ್ದನ್ನು ನಾವು ಇಲ್ಲಿಯವರೆಗೂ ಕೇಳುತ್ತಿದ್ದೇವೆ. ನಾನು ಹತ್ತಿಯನ್ನು ನಮ್ಮ ಕ್ಷೇತ್ರದಲ್ಲಿ ಹೆಚ್ಚಿಗೆ ಬೆಳೆಯುವಾಗ ಅದನ್ನು ಟೆಕ್ಸ್‌ಟೈಲ್ ಮಿಲ್ಸ್‌ಗೆ ಸಾಗಿಸಬಹುದೆಂದು ಹೇಳಿದ್ದೇವೆ. ಸಿರ್‌ಪುರ್‌ನಲ್ಲಿ ಒಂದು ರೀತಿಯ ಹುಲ್ಲುಸಿಗುತ್ತದೆ. ಅದನ್ನು ಫಾರಂಗಳಲ್ಲಿ ಹೆಚ್ಚಿಗೆ ಬೆಳೆದು ಒಂದು ರೀತಿಯ ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಅನುಕೂಲವಿದೆ. ಅದರಿಂದ ಒಂದು ವಿಧವಾದ ಸೆಂಟನ್ನು ತಯಾರಿಸಿ ಪರದೇಶಗಳಿಗೆ ಕಳುಹಿಸಬಹುದು. ಇನ್ನೂ ಜೇವರ್ಗಿ, ಹೊಸಳ್ಳಿ ಮುಂತಾದ ಭಾಗಗಳಲ್ಲಿ ಒಂದು ವಿಧವಾದ ಕಲ್ಲುಗಳು ಸಿಗುವುದರಿಂದ ಅಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಸಹ ಸ್ಥಾಪಿಸಬಹುದು ನಮ್ಮಲ್ಲಿ ನೇಕಾರರು ಬೇಕಾದಷ್ಟು ಜನರಿದ್ದಾರೆ ಅವರು ತಯಾರು ಮಾಡಂಥ ಸೀರೆಗಳನ್ನು ಬೇರೆ ದೇಶಗಳಿಗೆ ಕಳುಹಿಸಬೇಕಾದರೆ ರೈಲು ಮಾರ್ಗ ಬಹಳ ಅವಶ್ಯಕ.

ಅದಿಲ್ಲದೇ ಇರುವುದರಿಂದ ಇವೆಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮಲ್ಲಿ ಕೆಲವಾರು ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದರೆ ಬಹು ಮುಖ್ಯವಾಗಿ ಬೇಕಾದ ರೈಲುಮಾರ್ಗದ ಸೌಕರ್ಯವಿಲ್ಲ ನಮಗ ಪ್ರೈಯಾರಿಟಿಯಾಗಲೀ, ಪ್ರಿಫರೆನ್ಸ್ ಆಗಲೀ ಸಿಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಈಗ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗುತ್ತಿದೆ. ಅದು ಆಯಿತೆಂದರೆ, ಅದರ ಕೆಳಗೆ ೨೦ ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಒದಗುತ್ತದೆ. ಇದರಿಂದ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ವ್ಯವಸಾಯದಲ್ಲಿ ಪಡೆದು ಹೆಚ್ಚಿಗೆ ಬೆಳೆಯನ್ನು ಬೆಳೆಯ ಬಹುದು. ಈಗ ನಮ್ಮ ಕ್ಷೇತ್ರ ಹೆಚ್ಚು ಸಂಪನ್ಮೂಲಗಳಿಂದ ಕೂಡಿರುವುದರಿಂದ, ಹೆಚ್ಚಿಗೆ ನಾನಾ ವಿಧವಾದ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ತಕ್ಕ ಸೌಕರ್ಯ ವಿರುವುದರಿಂದ, ಅಲ್ಲಿಗೆ ರೈಲುಮಾರ್ಗ ಅಗತ್ಯವಾಗಿದೆಯೆಂದು ನಾನು ಹೇಳ ಬಯಸುತ್ತೇನೆ. ಅಷ್ಟೇ ಅಲ್ಲದೆ. ಈಗ ಗುಲ್ಬರ್ಗಾ — ಬಳ್ಳಾರಿಗೆ ಹೋಗಬೇಕಾದರೆ ಆಂದ್ರದ ಮೂಲಕವೇ ಅಂದರೆ ಆಧೋನಿ ಮಾರ್ಗದಲ್ಲಿ ಹೋಗಬೇಕು. ನಾನು ಈಗ ಹೇಳುವುದು ಏನೆಂದರೆ, ಆಂಧ್ರ ಪ್ರದೇಶದಲ್ಲಿ ಮುಲ್ಕಿ ಟೂಲ್ಸ್ ಬಂದು ಅಲ್ಲಿ ಒಂದು ರೀತಿಯ ಗಲಾಟೆ ಆಗುತ್ತಾ ಇದೆ. ಅಲ್ಲಿ ಈ ರೀತಿಯಾದಂಥ ಗಲಾಟೆಗಳು ನಡೆಯುತ್ತಿರುವುದರಿಂದ, ನಾವೂ ಸಹ ಅನೇಕ ತೊಂದರೆಗಳಿಗೀಡಾಗಬೇಕಾಗುತ್ತದೆ. ಒಂದೊಂದುವೇಳೆ ನಾವು ಪ್ರಯಾಣ ಮಾಡಬೇಕಾದರೆ, ಬೆಳಿಗ್ಗೆ ೧೧ ಗಂಟೆಯಿಂದ ೪ ಗಂಟೆಯ ವರೆಗೂ ರೈಲಿಗಾಗಿ ಕಾಯಬೇಕಾದ ಪರಿಸ್ಥಿತಿಯೂ ಬಂದಿದೆ. ಆ ಒಂದು ತೊಂದರೆಯನ್ನು ನಾನು ಇಲ್ಲಿ ಹೇಳುವುದಕ್ಕೆ ಬಹಳ ಅಸಾಧ್ಯವಾಗಿದೆ. ಹಿಂದೆ ನಾವು ಅನೇಕ ಭಾರಿ ಇದೇ ರೀತಿಯಾದಂಥ ತೊಂದರೆಗಳನ್ನು ವಿಶೇಷವಾಗಿ ಹೊರಗೂ, ಒಳಗೂ ಆಂದ್ರಪ್ರದೇಶದಲ್ಲಿದ್ದಾಗ ಅನುಭವಿಸಿ ಬಂದಿದ್ದೇವೆ. ಗುಲ್ಬರ್ಗಾದಿಂದ ಬಳ್ಳಾರಿಗೆ ಹೋಗುವ ಮಾರ್ಗ ಜೇವರ್ಗಿ, ಸುರಪುರ್ ಪಹಪೂರ್, ಶಿರಹಟ್ಟಿ, ಸಿರಗುಪ್ಪಗಳ ಮೂಲಕ ಹಾದು ಹೋಗುವಂತೆ ಒಂದು ರೈಲು ಮಾರ್ಗವನ್ನು ತೀಕ್ಷ್ಣವಾಗಿ ನಮ್ಮ ಮೈಸೂರು ರಾಜ್ಯದಲ್ಲಿ ಹಾಕುವಂತೆ ಮಾಡಬೇಕಾದುದು ಬಹಳ ಅತ್ಯಗತ್ಯವೆಂದು ನಾನು ಹೇಳಬಯಸುತ್ತೇನೆ. ಅಲ್ಲದೆ ಇಂದು ನಮ್ಮಲ್ಲಿ ಬರಗಾಲ ಪರಿಸ್ಥಿತಿ ಬಹಳ ಭೀಕರ ರೂಪವನ್ನು ತಾಳಿದೆ ಅದರ ಬಗ್ಗೆ ಪರಿಹಾರ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಂಡರೆ, ಅನೇಕ ಜನರಿಗೆ ಕೆಲವಾರು ಕೆಲಸಕಾರ್ಯಗಳನ್ನು ಒದಗಿಸಿ ಕೊಟ್ಟಹಾಗೆ ಆಗುತ್ತದೆಂದು ಹೇಳುತ್ತೇನೆ. ಒಟ್ಟಿನಲ್ಲಿ ಈ ರೈಲುಮಾರ್ಗ ಅತಿ ಅವಶ್ಯಕವೆಂದು ಹೇಳಿ ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಇವತ್ತು ಈ ಒಂದು ನಿರ್ಣಯದ ಮೇಲೆ ಮಾತನಾಡುವುದು ಬಹಳ ಅಗತ್ಯವಿದೆ. ಇದರ ಬಗ್ಗೆ ಕೆಲವು ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಯಾವುದೇ ಒಂದು ದೇಶ ಮುಂದುವರಿಯಬೇಕಾಗಿದ್ದರೆ, ಅಥವಾ ಆ ಒಂಡು ದೇಶದ ಹಿಂದುಳಿದ ಭಾಗಗಳಾದರೂ ಮುಂದುವರಿಯಬೇಕಾಗಿದ್ದರೆ, ಆ ಭಾಗಗಳಿಗೆ ಮೊಟ್ಟಮೊದಲನೆಯದಾಗಿ ರಸ್ತೆ ಸಾರಿಗೆ, ರೈಲುಮಾರ್ಗ, ಟ್ರಾನ್ಸ್‌ಪೋರೇಷನ್ ಕಮ್ಯೂನಿಕೇಷನ್ಸ್ ವಿಷಯದಲ್ಲಿ ಸರ್ಕಾರಹೆಚ್ಚು ನಿಗಾ ವಹಿಸಬೇಕು. ಇಲ್ಲದಿದ್ದರೆ ಆ ಪ್ರದೇಶ ಮುಂದುದರಿಯುವುದಕ್ಕೆ ಸಾಧ್ಯವಿಲ್ಲ. ಬಳ್ಳಾರಿ ಮಾರ್ಗವಾಗಿ ಒಂದು ಹೊಸ ರೈಲ್ವೆ ಮಾರ್ಗ ಬರಬೇಕು, ಏಕೆಂದರೆ ಅಲ್ಲಿ ಎಷ್ಟೋ ಖನಿಜಪದಾರ್ಥಗಳು ಕೈಗಾರಿಕೆಗಳು ಬೆಳೆಯುವುದು ಸಾಧ್ಯವಿದೆ. ಹತ್ತಿ ಕಬ್ಬಿಣ, ಮ್ಯಾಂಗನೀಸ್ ಮುಂತಾದ ಪದಾರ್ಥಗಳು ಅಲ್ಲಿ ಹೇರಳವಾಗಿ ಸಿಗುತ್ತವೆ. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಈ ಭಾಗಕ್ಕೆ ಅನೇಕರು ಬರುವ ಕಾಲದಲ್ಲಿ ಈಗಾಗಲೇ ಇಂಟಿಗ್ರೇಷನ್ ಆಗಿರುವಾಗ ಅದಕ್ಕೆ ಒಂದು ನೈಜ್ಯವಾದ ಸ್ವರೂಪವನ್ನು ಸರ್ಕಾರದವರು ಕೊಡಬೇಕಾಗಿದೆ. ಆ ಭಾಗಗಳಿಂದ ಬರತಕ್ಕವರಿಗೆ ಸಾಕಷ್ಟು ಸೌಲಭ್ಯಗಳು ಇಲ್ಲಿ ಸಿಗದಿದ್ದರೆ, ಅವರು ಆ ರೀತಿಯಾಗಿ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಆಂಧ್ರಭಾಗದಿಂದ ಇಲ್ಲಿಗೆ ಬರುವವರಿಗೆ ಬಹಳ ತೊಂದರೆಗಳಿವೆ. ಅಲ್ಲಿಗೆ ರೈಲು ಮಾರ್ಗ ಬಂದರೆ ಇಂತಹ ತೊಂದರೆಗಳು ಅವರಿಗೆ ಬರುವುದಿಲ್ಲ. ಆದ್ದರಿಂದ ಈ ಮನೆಯ ಸದಸ್ಯರು ಸಾಕಷ್ಟು ಒತ್ತಾಯದಿಂದ ಈ ಒಂದು ನಿರ್ಣಯದ ಬಗ್ಗೆ ಕೇಂದ್ರಸರ್ಕಾರದ ಮೇಲೆ ಪ್ರಭಾವ ಬೀರಬೇಕು. ಕೇಂದ್ರದ ಮಂತ್ರಿಮಂಡಲದ ಮೇಲೆ ನಮ್ಮ ಮಂತ್ರಿಗಳೂ ಸಹ ಒತ್ತಾಯಮಾಡಬೇಕು. ಕೇಂದ್ರ ಮಂತ್ರಿಮಂಡಲದಲ್ಲಿ ರೈಲ್ವೆ ಸಚಿವರು ನಮ್ಮ ಕನ್ನಡಿಗರೇ ಆಗಿರುವುದರಿಂದ, ಇದನ್ನು ಜಾಗ್ರತೆಯಾಗಿ ಮಾಡಿಕೊಳ್ಳಲು ಪ್ರಯತ್ನ

ಮಾಡಬೇಕು. ಇದರಿಂದ ಅಲ್ಲಿನ ಜನರಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಒಟ್ಟಿನಲ್ಲಿ ನಾವೆಲ್ಲರೂ ಈ ಒಂದು ನಿರ್ಣಯದ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಹೆಚ್ಚಿನ ಒತ್ತಾಯವನ್ನು ತರುವುದಕ್ಕೆ ಪ್ರಯತ್ನ ಮಾಡಲು ಈ ನಿರ್ಣಯಕ್ಕೆ ಎಲ್ಲ ಮಾನ್ಯ ಸದಸ್ಯರು ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳಿ ಈ ನನ್ನ ಸಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The house will now adjourn and meet again Monday, at 1-00 P.M.

The House adjourned at of One the Clock to meet again at One of the Clock on Monday, the 11th December 1972.

WD 18805—GPB—11—1—1974